# ನಾಗರಪಂಚಮಿ : ರೋಗಿಗಳಿಗೆ ಹಾಲು ಹಣ್ಣು ವಿತರಣೆ

ಚಿತ್ರದುರ್ಗ ಆ. 13 - ನಾಡಿನಾದ್ಯಂತ ಇಂದು ನಾಗರಪಂಚಮಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಭಾರತೀಯ ಸಂಪ್ರದಾಯದಂತೆ ನಾಗರಕಲ್ಲುಗಳಿಗೆ ಮತ್ತು ಹುತ್ತಕ್ಕೆ ಹಾಲನ್ನೆರೆಯುವ ಸಂಪ್ರದಾಯವು ಅಷ್ಟೊಂದು ಸೂಕ್ತವಾದುದಲ್ಲ. ಹಾಗಾಗಿ ಶಾಲಾಮಕ್ಕಳಿಗೆ, ರೋಗಿಗಳಿಗೆ ಹಾಲು, ಬ್ರೆಡ್ ಮತ್ತು ಹಣ್ಣನ್ನು ವಿತರಿಸುವ ಮೂಲಕ ನಾಗರಪಂಚಮಿಯನ್ನು ಬಸವ ಪಂಚಮಿಯಾಗಿ ಆಚರಿಸಲಾಗುತ್ತಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಾಗರಪಂಚಮಿ ನಿಮಿತ್ತ ನಗರದ ಬಸವೇಶ್ವರ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಲು ಹಣ್ಣು ವಿತರಿಸುತ್ತ ಮಾತನಾಡಿದ ಶ್ರೀಗಳು, ಇದು ಹಾಲು ಕುಡಿಸುವ ಹಬ್ಬ, ಹಾಲನ್ನು ಚೆಲ್ಲುವ ಹಬ್ಬ ಅಲ್ಲ. ಚೆಲ್ಲುವ ಹಾಲನ್ನು ತಡೆದು ಜನರಿಗೆ ಕುಡಿಯುವಂತೆ ಮಾಡುವ ಸಂಪ್ರದಾಯ ಬರಬೇಕಿದೆ ಎಂದು ಅಭಿಪ್ರಾಯಪಟ್ಟರು.

ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಬಸವೇಶ್ವರ ವೈದ್ಯಕೀಯ ಕಾಲೇಜಿನ ಡೀನ್ ಡಾ|| ಪ್ರಶಾಂತ್, ಡಾ|| ಪಾಲಾಕ್ಷಯ್ಯ, ಎಸ್.ಷಣ್ಮುಖಪ್ಪ ಮತ್ತು ಆಸ್ಪತ್ರೆಯ ಸಿಬ್ಬಂದಿ ಮೊದಲಾದವರಿದ್ದರು.



